

# ‘ಕಥೆಯೇ ಸಂಭಾಷಣೆಯನ್ನು ಬರೆಸಿಕೊಳ್ಳುತ್ತದೆ

‘ಬರೀ ಪಂಚಿಂಗ್ ಡೈಲಾಗ್ ಅಷ್ಟೇ ಬರ್ಕೊಂಡಿದ್ರೆ ಬೇಗ ಖಾಲಿಯಾಗಿಬಿಡ್ತೀವಿ. ಕಥೆಯ ಅಗತ್ಯವನ್ನು ಅರಿತು ಬರೆಯಬೇಕು’ ಎನ್ನುವ ಪ್ರಶಾಂತ್ ರಾಜಪ್ಪ, ಆ್ಯಕ್ಷನ್ ಕಟ್ ಹೇಳುವ ತಮ್ಮ ಎಂದಿನ ಕನಸನ್ನು ಸದ್ಯದಲ್ಲಿಯೇ ನನಸಾಗಿಸಿಕೊಳ್ಳುವ ಉಮೇದಿನಲ್ಲಿದ್ದಾರೆ.

**■ ಪದ್ಮನಾಭ ಭಟ್**

ಇಂದಿನ ನಮ್ಮ ಹಲವು ಸೂಪರ್ ಸ್ಟಾರ್‌ಗಳ ಬಂಡವಾಳ ಅವರ ನಟನಾಪ್ರತಿಭೆಯಲ್ಲ; ಕಥೆಯ ಬಿಗಿತನವಲ್ಲ; ಪಾತ್ರದ ತೂಕವಲ್ಲ. ಅವರು ಚಿತ್ರಮಂದಿರದೊಳಗೆ ಶಿಳ್ಳೆ ಗಿಟ್ಟಿಸಿಕೊಳ್ಳುವುದು ತೆರೆಯ ಸೀಳಿ ಎದೆಗೆ ನಾಟುವ ಪಂಚಿಂಗ್ ಡೈಲಾಗ್‌ಗಳಿಂದ! ವಿಲನ್ ಮುಖದ ಮೇಲೆ ನಾಯಕನ ಮುಷ್ಠಿ ಮುತ್ತಿಕ್ಕುವ ಮೊದಲು ಉದುರಿಸುವ ಒಂದು ಡೈಲಾಗ್ ಕೇಳಿ ಅಭಿಮಾನಿಗಳು ಹುಚ್ಚೆದ್ದು ಕುಣಿಯುತ್ತಾರೆ. ಇದು ಮಾಸ್ ಮಸಾಲ ಸಿನಿಮಾಗಳ ಸಿದ್ಧಸೂತ್ರ.

ಹಾಗಾದ್ರೆ ಡೈಲಾಗೊಂದಿದ್ರೆ ಸಾಕಾ? ಡೈಲಾಗನ್ನೇ ನೆಚ್ಕೊಂಡು ಸಿನಿಮಾ ಮಾಡೋದು ಸರೀನಾ? ‘ಖಂಡಿತ ಸರಿ ಅಲ್ಲ. ನಮ್ಮ ಕನ್ನಡ ಚಿತ್ರರಂಗದಲ್ಲಿ ಹೀಗೆ ಸಂಭಾಷಣೆಯನ್ನೇ ನೆಚ್ಚಿಕೊಂಡು ಸಿನಿಮಾ ಮಾಡುವವರಿದ್ದಾರೆ. ಇದು ಅವರ ತಪ್ಪೂ ಅಲ್ಲ, ಚಿತ್ರರಂಗದ ತಪ್ಪೂ ಅಲ್ಲ. ಜನ ಅದನ್ನು ಎಂಜಾಯ್ ಮಾಡ್ತಾರೆ ಅನ್ನೋ ಕಾರಣಕ್ಕೆ ಅವರು ಮಾಡ್ತಾರೆ. ಆದರೆ ವೈಯಕ್ತಿಕವಾಗಿ ನನಗೆ ಇದು ಇಷ್ಟವಿಲ್ಲ. ಬೇರೆ ಭಾಷೆಗಳಲ್ಲಿ ಹೀಗಿಲ್ಲ. ನಾನು ಯಾವತ್ತೂ ಒಂದು ಸಿನಿಮಾಗೆ ಸಂಭಾಷಣೆ ಬರೆಯುವಾಗ ಆ ದೃಶ್ಯ ಏನನ್ನು ಬೇಡುತ್ತದೆ. ಆ ಕಥೆಗೆ ಏನು ಅಗತ್ಯವಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಬರೆಯುತ್ತೇನೆಯೇ ಹೊರತು ಸಂಭಾಷಣೆಯೇ ಎದ್ದು ಕಾಣಬೇಕು ಎಂದುಕೊಳ್ಳುವುದಿಲ್ಲ. ಅದು ಸರಿಯೂ ಅಲ್ಲ’ ಹೀಗೆ ಸ್ಪಷ್ಟವಾಗಿ ಹೇಳುತ್ತಾರೆ ಪ್ರಶಾಂತ್ ರಾಜಪ್ಪ. ‘ಸಂಭಾಷಣೆಯನ್ನು ಕಥೆಯೇ ಬರೆಸಿಕೊಳ್ಳುತ್ತದೆ’ ಎನ್ನುವುದು ಅವರ ಬಲವಾದ ನಂಬಿಕೆ.

ಸದ್ಯ ಕನ್ನಡ ಚಿತ್ರರಂಗದಲ್ಲಿ ಕೇಳಿಬರುತ್ತಿರುವ ಕೆಲವೇ ಕೆಲವು ಸಂಭಾಷಣೆಕಾರರಲ್ಲಿ ಪ್ರಶಾಂತ್ ರಾಜಪ್ಪ ಅವರೂ ಒಬ್ಬರು. ‘ಸಿನಿಮಾ ಎನ್ನುವುದು ಹಲವು ಕಲೆಗಳ ಸಂಯೋಗದಿಂದ ಆಗುವುದು. ನಟನೆ, ನಿರ್ದೇಶನ, ಛಾಯಾಗ್ರಹಣ, ಸಂಕಲನ ಎಲ್ಲ ವಿಭಾಗವೂ ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಒಳ್ಳೆಯ ಸಿನಿಮಾ ಆಗಲು ಸಾಧ್ಯ. ಅವುಗಳಲ್ಲಿ ಯಾವುದೋ ಒಂದು ವಿಭಾಗ ಎದ್ದು ಕಂಡರೆ ಅದು ಸಿನಿಮಾದ ವೈಫಲ್ಯ’ ಎನ್ನುವುದು ಅವರ ಅಭಿಮತ.

ಬೆಂಗಳೂರಿನಲ್ಲಿಯೇ ಹುಟ್ಟಿಬೆಳೆದ ಪ್ರಶಾಂತ್, ಮೆಕ್ಯಾನಿಕಲ್ ಎಂಜಿನಿಯರಿಂಗ್ ಓದುವಾಗಲೇ ಸಿನಿಮಾ ಗೀಳನ್ನು ಮನಸ್ಸಿಗೆ ಹಚ್ಚಿಕೊಂಡವರು. ಕಾಲೇಜಿಗಿಂತ ಚಿತ್ರಮಂದಿರಗಳಲ್ಲಿಯೇ ಜಾಸ್ತಿ ಇರುತ್ತಿದ್ದ ಇವರಿಗೆ ನನ್ನ ದಾರಿ ಸಿನಿಮಾ ಎಂದು ಅರಿವಾಗಲು ಹೆಚ್ಚು ಕಾಲ ಬೇಕಾಗಲಿಲ್ಲ. ಸಹಾಯಕ ನಿರ್ದೇಶಕನಾಗಿ ಗಾಂಧಿನಗರದ ಗಲ್ಲಿಯನ್ನು ಹೊಕ್ಕ ಇವರೊಳಗಿನ ಸಂಭಾಷಣೆಕಾರರನ್ನು ಜಾಗೃತಗೊಳಿಸಿದ್ದು ‘ವಿಕ್ಟರಿ’ ಸಿನಿಮಾ. ಈ ಸಿನಿಮಾದ ಯಶಸ್ಸು ಅವರಿಗೆ ಇನ್ನು ಹಲವು ಸಿನಿಮಾಗಳಿಗೆ ಸಂಭಾಷಣೆ ಬರೆಯುವ ಅವಕಾಶ ಹುಟ್ಟಿಸಿತು.

‘ನಾನು ನಿರಂತರವಾಗಿ ನೋಡುತ್ತಿದ್ದ ಸಿನಿಮಾಗಳು ಮತ್ತು ನನ್ನ ಓದಿನ ಅಭ್ಯಾಸವೇ ನನ್ನಲ್ಲಿ ಒಬ್ಬ ಸಂಭಾಷಣೆಕಾರನನ್ನು ರೂಪಿಸಿದೆ’ ಎಂದು ಅವರು ಹೇಳಿಕೊಳ್ಳುತ್ತಾರೆ. ಸಾಹಿತ್ಯದ ಓದು ಅವರ ಆಪ್ತ ಹವ್ಯಾಸಗಳಲ್ಲಿ ಒಂದು. ಬೀಚಿ ಅವರಿಷ್ಟದ ಬರಹಗಾರ. ಬರವಣಿಗೆಯ ಕೆಲಸವನ್ನು ಎಂಜಾಯ್ ಮಾಡುತ್ತಿದ್ದರೂ ಪ್ರಶಾಂತ್ ರಾಜಪ್ಪ ಅವರ ಗಮ್ಯ ಇರುವುದು ನಿರ್ದೇಶನದಲ್ಲಿ. ಕಮರ್ಷಿಯಲ್ ಚೌಕಟ್ಟಿನೊಳಗೇ ಸಂವೇದನಾಶೀಲ ಸಿನಿಮಾಗಳನ್ನು ಮಾಡಬೇಕು ಎನ್ನುವುದು ಅವರ ಅಭಿಲಾಷೆ. ಅದಕ್ಕೆ ತಕ್ಕ ಸಿದ್ಧತೆಯನ್ನೂ ಮಾಡಿಕೊಂಡಿದ್ದಾರೆ.

‘ಒಂದಿಷ್ಟು ಕಥೆಗಳನ್ನು ಸಿದ್ಧಮಾಡಿಕೊಂಡಿದ್ದೀನಿ. ಪ್ರಯೋಗಾತ್ಮಕ ಸಿನಿಮಾಗಳನ್ನೂ ಮಾಡಬೇಕು ಎಂಬ ಆಸೆಯಿದೆ. ಆದರೆ ನನ್ನ ಮೊದಲ ಸಿನಿಮಾ ಪಕ್ಕಾ ಕಮರ್ಷಿಯಲ್ ಆಗಿಯೇ ಇರುತ್ತದೆ. ಜನರಿಗೆ ರಂಜನೆ ನೀಡುತ್ತಲೇ ಒಳ್ಳೆಯ ಸಂಗತಿಗಳನ್ನು ಹೇಳುವುದು ನನ್ನ ಉದ್ದೇಶ’ ಎಂದು ಕನಸಿನ ದಾರಿಯ ದಿಕ್ಕನ್ನು ಬಿಚ್ಚಿಡುತ್ತಾರೆ ಪ್ರಶಾಂತ್. ಅವರು ನಿರ್ದೇಶಕನ ಟೋಪಿ ತೊಟ್ಟು ಕೆಲಸ ಮಾಡುವ ದಿನಗಳು ಹತ್ತಿರದಲ್ಲಿಯೇ ಇವೆ. ■